F.Y.
March 2017

Reg. No. ....................................

Name ........................................

606

## Part - II

## KANNADA

Maximum : 80 Scores

Time : 2½ Hours

Cool off time : 15 Minutes

***General Instructions to Candidates :***

- There is a 'Cool off time' of 15 minutes in addition to the writing time of 2½ hrs.
- You are neither allowed to write your answers nor to discuss anything with others during the 'cool off time'.
- Use the 'cool off time' to get familiar with questions and to plan your answers.
- Read questions carefully before answering.
- All questions are compulsory and only internal choice is allowed.
- When you select a question, all the sub-questions must be answered from the same question itself.
- Electronic devices except nonprogrammable calculators are not allowed in the Examination Hall.

**ಸೂಚನೆಗಳು:**

- ಉತ್ತರ ಬರೆಯಲು 2½ ಗಂಟೆಗಳ ಸಮಯವಲ್ಲದೆ 15 ನಿಮಿಷಗಳ 'ಕೂಲ್ ಆಫ್ ಟೈಮ್'ನ್ನು ನೀಡಲಾಗಿದೆ.
- 'ಕೂಲ್ ಆಫ್ ಟೈಮ್' ನಲ್ಲಿ ಉತ್ತರಗಳನ್ನು ಬರೆಯುವುದಾಗಲೀ ಇತರರೊಂದಿಗೆ ಚರ್ಚಿಸುವುದಾಗಲೀ ಮಾಡಬಾರದು
- 'ಕೂಲ್ ಆಫ್ ಟೈಮ್‌ನ್ನು' ಪ್ರಶ್ನೆಗಳನ್ನು ಪರಿಚಯ ಮಾಡಿಕೊಳ್ಳಲು ಹಾಗೂ ಉತ್ತರಗಳ ಕುರಿತು ಆಲೋಚಿಸಲು ಉಪಯೋಗಿಸಿರಿ.
- ಉತ್ತರಗಳನ್ನು ಬರೆಯುವ ಮೊದಲು ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಎಲ್ಲ ಪ್ರಶ್ನೆಗಳೂ ಕಡ್ಡಾಯವಾಗಿವೆ. ಆಯ್ಕೆಗಳಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಉತ್ತರಿಸಿರಿ.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಆವರಣದೊಳಗಿನಿಂದ ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ :**

**1.** ಈ ಕೆಳಗಿನವುಗಳಲ್ಲಿ ಭುವನೇಶ್ವರಿ ಹೆಗಡೆಯವರ ಕೃತಿ ಯಾವುದು?
(ನವಿಲು, ಪ್ರತಿಸಂಸ್ಕೃತಿ, ಬೆಳಗು, ಮುಗುಳು) **(1)**

**2.** 'ಸುಖ'–ಈ ಪದದ ತದ್ಭವ ರೂಪವನ್ನು ಬರೆಯಿರಿ
(ಸಗ್ಗ, ಸಖ, ಸೊಗ, ಸೌಖ್ಯ) **(1)**

3. ಈ ಕೆಳಗಿನವುಗಳಲ್ಲಿ ಆಯ್ದಕ್ಕಿ ಲಕ್ಕಮ್ಮನ ವಚನಗಳಲ್ಲಿ ಕಂಡುಬರುವ ಅಂಕಿತ ಯಾವುದು?
(ಅಮಲೇಶ್ವರ ಲಿಂಗ, ಕೂಡಲಸಂಗಮದೇವ, ಅಮುಗೇಶ್ವರ, ಚೆನ್ನಮಲ್ಲಿಕಾರ್ಜುನ) (1)

4. ಈ ಕೆಳಗಿನವುಗಳಲ್ಲಿ ಅನ್ಯದೇಶೀಯ ಪದ ಯಾವುದು?
(ಮೂಡಣ, ಮೊಸರು, ಕಲಮು, ನೆಲ) (1)

**5 ರಿಂದ 14 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ :**

5. 'ಅತ್ಯಪೂರ್ವ'–ಈ ಪದವನ್ನು ಬಿಂಗಡಿಸಿ ಬರೆಯಿರಿ. (1)

6. ವಿನೇಯ ಜನ ವನಜವನ ದಿವಾಕರನ್–ಇಲ್ಲಿ ಕಂಡುಬರುವ ಅಲಂಕಾರ ಯಾವುದು? (1)

7. 'ಭವ' 'ಗೇಹ' – ಈ ಪದಗಳ ಅರ್ಥವನ್ನು ಬರೆಯಿರಿ. (1)

8. ಚಿತ್ರಕಲೆಯಲ್ಲಿ ಪ್ರವೀಣನಾದ ಕಲಾವಿದನು ಸುಂದರವಾದ ರಚನೆಗಳನ್ನು ಸೃಷ್ಟಿಸಿದನು – ಅಡಿಗೆರೆ ಎಳೆದ ಪದದ ಭಾವನಾಮ ರೂಪವನ್ನು ಬರೆಯಿರಿ. (1)

**9 ರಿಂದ 12 ರ ವರೆಗಿನ ಪ್ರಶ್ನೆಗಳನ್ನು ಸರಿಹೊಂದಿಸಿ ಬರೆಯಿರಿ :**

9. ಬಸವಣ್ಣ – ಗದುಗಿನ ಭಾರತ – ಧರ್ಮೋ ಜಯತಿ ನಾಧರ್ಮ (1)

10. ಕುಮಾರವ್ಯಾಸ – ವಚನ – ಬಾಲಕಯುಗಮಂ ಚರಿಗೆಗೆ ಬೀಱಿಕೊಡೆ (1)

11. ದುರ್ಗಸಿಂಹ–ಯಶೋಧರ ಚರಿತೆ–ಕೊರಳ ಸೆರೆ ಹಿಗ್ಗಿದವು (1)

12. ಜನ್ನ – ಭೇದಪ್ರಕರಣ – ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ (1)

13. 'ಎಲ್ಲಿಗೊಕ್ಕೀ ನಿಮ್ಮಪ್ಪ ಸಾಲಕ್ಕ ನಿನ್ ಸಂಬ್ಳ ಇಟ್ಟಾನ ......... ಈಗೆಲ್ಲಿರ‍್ತಾರೆ ನಿಮ್ಮಪ್ಪ ನಿಮ್ಮಮ್ಮ ಎಲ್ರು ಊರ್ಗೆ ಹೊಂಟೊಗಿರ‍್ತಾರೆ' –ಈ ಮಾತನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿರಿ. (2)

14. ಈ ಕೆಳಗಿನ ವಾಕ್ಯವನ್ನು ಸರಳವಾಕ್ಯಗಳಾಗಿ ಬರೆಯಿರಿ

ಕಾಮಾನಬಿಲ್ಲಿನ ತುಂಡುಗಳಂತೆ ಚೆಲುವಾಗಿದ್ದ ಪುಟ್ಟ ಮೀನುಗಳಂತೂ ಬುಡಕಟ್ಟು ಹುಡುಗಿಯರಂತೆ ಅಡ್ಡಾಡುತ್ತಿದ್ದವು (2)

**15 ರಿಂದ 26 ರ ವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ :**

15. ಭೂತಾರಾಧನೆಯನ್ನು ರಂಗಭೂಮಿ ತಜ್ಞರು 'ಒಂದು ಪರಿಪೂರ್ಣ ರಂಗಭೂಮಿ' ಎಂದು ಕರೆಯಲು ಕಾರಣವೇನು? (2)

16. ಡಿವಿಜಿಯವರ ಅಭಿಪ್ರಾಯದಂತೆ ನಮ್ಮ ಧರ್ಮದೀಪ ಯಾವುದು? (2)

17. ಕೆಳಗಿನ ಜನಪದ ತ್ರಿಪದಿಯ ಆಶಯವನ್ನು ಬರೆಯಿರಿ

ನಿದ್ದಿಗೆ ಮದ್ದುಂಟೆ ಬುದ್ಧಿಗೆ ಕೇಡುಂಟೆ
ಇದ್ಯ ಬಲ್ಲವಗೆ ಭಯವುಂಟೆ – ದ್ಯಾವರೆ
ಮದ್ದುಂಟೆ ಜನನ ಮರಣಾಕೆ (3)

18. ಕವಿ ದ. ರಾ. ಬೇಂದ್ರೆಯವರು ಕಾಡನ್ನು ಗಂಧರ್ವರಾ ಸೀಮೆಯಾಯಿತು ಎಂದು ಹೇಳಿದುದರ ಔಚಿತ್ಯವನ್ನು ಬರೆಯಿರಿ. (3)

19. 'ಸಾಕ್ಷಿಯಾಗಿ ತಪ್ಪಿ ನುಡಿವರ್ಗೆ ಪಾಪಮೆ ಸಂಭವಿಸುವುದು'–ಈ ಮಾತನ್ನು ಸಂದರ್ಭ ಸಹಿತ ವಿವರಿಸಿರಿ. (3)

20. ಶೇಣಿಯವರು ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳ ಕುರಿತು ಬರೆಯಿರಿ. (4)

21. ಸುಗ್ಗಿಯಾಗಮನದಿಂದ ಪಶು ಪಕ್ಷಿಗಳಲ್ಲುಂಟಾಗುವ ಆನಂದವನ್ನು 'ಸುಗ್ಗಿ ಬರುತಿದೆ' ಎಂಬ ಪದ್ಯದ ಆಧಾರದಲ್ಲಿ ವಿವರಿಸಿರಿ. (4)

22. 'ಕೋಪದಿಂದ ವ್ಯಕ್ತಿ ತನ್ನ ಹಾಗೂ ಇತರರ ನಾಶಕ್ಕೆ ಕಾರಣನಾಗುತ್ತಾನೆ'–ಈ ಮಾತನ್ನು ನೀವು ಓದಿದ ಬಸವಣ್ಣನವರ ವಚನದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿರಿ. (4)

23. ನಿಮಗೆ ತಿಳಿದಿರುವ ಯಾವುದಾದರೊಂದು ಪ್ರೇಕ್ಷಣೀಯ ಸ್ಥಳದ ಕುರಿತು ಗೆಳೆಯ/ಗೆಳತಿಗೆ ಪತ್ರವೊಂದನ್ನು ಬರೆಯಿರಿ. **(4)**

24. ಸುನಾಮಿಯ ಹಾಡು ಕವನದ ಆಶಯವನ್ನು ವಿಶದಪಡಿಸಿರಿ. ಕವನವು ನೀಡುವ ಸಂದೇಶವನ್ನು ಸ್ಪಷ್ಟಪಡಿಸಿರಿ. **(5)**

25. ಖಾದ್ರಿಕಾಕರವರು ಸುರಂಗ ತೋಡಲು ಮುಂದಾಗುವುದಕ್ಕೆ ಕಾರಣವಾದ ಸನ್ನಿವೇಶವನ್ನು ವಿವರಿಸಿರಿ. **(5)**

26. ಲೋಕ ಪ್ರಸಿದ್ಧಿಯ ಜಯದಿಂದುಂಟಾಗುವ ಅನಾಹುತಗಳನ್ನು ಬ್ಲೆಸ್ ಹಿಮ್ ಎಂಬ ಕವನದಲ್ಲಿ ಹೇಗೆ ಚಿತ್ರಿಸಲಾಗಿದೆ? ಬರೆಯಿರಿ? **(5)**

**ಒಂದು ಪುಟಕ್ಕೆ ಮೀರದಂತೆ ಬರೆಯಿರಿ :**

27. 'ಬಾಲ ಕಾರ್ಮಿಕತನಕ್ಕೆ ಘೋರ ಬಡತನವೇ ಕಾರಣ'-ಈ ಮಾತನ್ನು ಹುಗ್ಗಿ ಕಥೆಯ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ. **(6)**

28. ಅಭಯರುಚಿ ಅಭಯಮತಿಯರನ್ನು ಕಂಡು 'ಇವರ ನೆಗಱ್ತೆಕರಂ ಪಿರಿದು ಧೀರರಕಟ ಕುಮಾರರ್' ಎಂದು ಮಾರಿದತ್ತನು ನುಡಿಯಲು ಕಾರಣವಾದ ಸನ್ನಿವೇಶವನ್ನು ವಿವರಿಸಿ ಬರೆಯಿರಿ. **(6)**

**ಒಂದೂವರೆ ಪುಟಕ್ಕೆ ಮೀರದಂತೆ ಬರೆಯಿರಿ :**

29. 'ನಿನ್ನಯ ವೀರರ್ಯೆವರ ನೋಯಿಸೆನು' ಪಾಠದಲ್ಲಿ ಕರ್ಣನು ಮಾನಸಿಕ ತೊಳಲಾಟಕ್ಕೆ ಒಳಗಾಗುವ ಬಗೆಯನ್ನು ವಿವರಿಸಿರಿ. **(8)**

**ಅಥವಾ**

ಬಕ ನಾಟಕದಲ್ಲಿ ಬರುವ ಭ್ರಷ್ಟಾಚಾರದ ಸ್ವರೂಪವನ್ನು ಗಮನಿಸಿಕೊಂಡು 'ಭ್ರಷ್ಟಾಚಾರ-ಒಂದು ಸಾಮಾಜಿಕ ಪಿಡುಗು'-ಎಂಬ ವಿಷಯದ ಕುರಿತು ತರಗತಿಯಲ್ಲಿ ನಡೆಯಲಿರುವ ವಿಚಾರ ಸಂಕಿರಣದಲ್ಲಿ ಮಂಡಿಸಲು ಪ್ರಬಂಧವೊಂದನ್ನು ಬರೆಯಿರಿ. **(8)**

---